**ಓ.ಎಸ್ ನಂಃ 300/2017**

**ಡಿ .ಡಬ್ಲು–1**

ಸಾಕ್ಷಿಯನ್ನು ದಿನಾಂಕಃ 19.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ– ವಾದಿ ಪರ ಶ್ರೀ. ಸಿ ಬಿ ಎಸ್ ವಕೀಲರಿಂದ**

ನಾನು ಶಾಲೆಗೆ ಹೋಗಿರುವುದಿಲ್ಲ. ನಿಮಗೆ ಸಹಿ ಮಾಡಲು ಬರುತ್ತದೆಯಾ ಎಂದರೆ ಹೌದು , ಕನ್ನಡ ಓದಲು ಬರುವುದಿಲ್ಲ. ನಿಮ್ಮ ತಾತ ಕೆಂಪಣ್ಣನವರನ್ನು ನೋಡಿರುತ್ತೀರಾ ಎಂದರೆ ಇಲ್ಲ. ಸದರಿ ಕೆಂಪಣ್ಣನವರು ನಾನು ಹುಟ್ಟುವ ಎಷ್ಟು ವರುಷಗಳ ಮೊದಲು ತೀರಿಕೊಂಡಿರುತ್ತಾರೆಂದು ಗೊತ್ತಿಲ್ಲ. ನೀವು ಯಾವ ವರುಷದಲ್ಲಿ ಹುಟ್ಟಿರುತ್ತೀರಾ ಎಂದರೆ ಗೊತ್ತಿಲ್ಲ. ನನಗೆ 50 ವರುಷಗಳಾಗಿರುತ್ತದೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಎಷ್ಟು ವರುಷಗಳಾಗಿದೆ ಎಂದು ಹೇಳಿರುತ್ತೀರಾ ಎಂದರೆ 49 ವರುಷಗಳು. ನಿಮ್ಮ ತಾತನಿಗೆ ಎಷ್ಟು ಜನ ಗಂಡು ಮಕ್ಕಳು ಎಂದರೆ 3 ಜನ ಅವರುಗಳು ನಾರಾಯಣಪ್ಪ , ರಾಮಪ್ಪ ಮತ್ತು ಹನುಮಂತಪ್ಪ . ನಾರಾಯಣಪ್ಪನವರಿಗೆ 9 ಜನ ಮಕ್ಕಳು , ರಾಮಪ್ಪನವರಿಗೆ ಒಬ್ಬ ಮಗಳು ಅಕೆಯ ಹೆಸರು ಪಿಳ್ಳಮ್ಮ ಎಂದರೆ ಸರಿ . ಅವರು ನೇರಳೇಕರೆಯಲ್ಲಿ ವಾಸವಾಗಿರುತ್ತಾರೆ. ನಿಡಿ 2 ರಲ್ಲಿ ಪಿಳ್ಳಮ್ಮ ನವರ ಹೆಸರನ್ನು ನಮೂದು ಮಾಡಿರುತ್ತೀರಾ ಎಂದರೆ ತೋರಿಸಿರುವುದಿಲ್ಲ. ನಿಡಿ 2 ನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ನಾವೇ ತಯಾರು ಮಾಡಿರುತ್ತೇವೆ. ಹನುಮಂತಪ್ಪ ರವರ ಮಕ್ಕಳನ್ನೂ ಸಹ ನಿಡಿ 2 ರಲ್ಲಿ ತೋರಿಲ್ಲ ಎಂದರೆ ಅವರಿಗೆ ಮದುಮೆ ಯಾಗಿತ್ತು ಅವರಿಗೆ ಮಕ್ಕಳು ಇರಲಿಲ್ಲ.

ವಾದಿಯರೇ ಹನುಮಂತಪ್ಪನ ಮಕ್ಕಳು ಎಂದರೆ ಸರಿಯಲ್ಲ. ಹನುಮಂತಪ್ಪ ಮದುವೆಯಾಗಿದ್ದ ನೂಕಲುಬಂಡೆಯ ಪಾರ್ವತಮ್ಮ ರವರು ದಿನಾಂಕ 8.03.1993 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ. ಹನುವಂತಪ್ಪ ನವರಿಗೂ ಪಾರ್ವತಮ್ಮನವರಿಗೂ ಯಾವುಕೇ ಸಂಬಂದ ಇಲ್ಲ ಎಂದೆ ಸರಿಯಲ್ಲ. ಹನುಮಂತಪ್ಪನ ಹೆಂಡತಿ ವಸಮ್ಮ ಎಂದರೆ ಸರಿಯಲ್ಲ. ಸದರಿ ಹನುಮಂತಪ್ಪ ಮತ್ತು ವಸಮ್ಮ ರವರ ಮಕ್ಕಳೇ ವಾದಿಗಳು ಎಂದರೆ ಸರಿಯಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ಪಾರ್ವತಮ್ಮ ನವರು ತೀರಿಕೊಂಡ ದಿನಾಂಕ ಹೇಳಿಲ್ಲ ಎಂದರೆ ಸರಿ . ಹನುಮಂತಪ್ಪನವರು ಯಾವಾಗ ತೀರಿಕೊಂಡಿರುತ್ತಾರೆ ಎಂದರೆ 1998 ರಲ್ಲಿ ಮರಕಲಗಘ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ. ಸದರಿ ಹನುಮಂತಪ್ಪನವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತೀರಾ ಎಂದರೆ ಇಲ್ಲ.

ದಾವಾ ಸ್ವತ್ತುಗಳು ಮೂಲತಃ ಯಾರಿಗೆ ಸೇರಿದ್ದು ಎಂದರೆ ನಾರಾಯಣಪ್ಪ ನವರ ಸ್ವಯಾರ್ಜಿತ ಜತ ಸ್ವತ್ತುಗಳು. ದಾವಾ ಸ್ವುತ್ತಗಳು ಮೂಲತಃ ನಿಮ್ಮ ತಾತ ಕೆಂಪಣ್ಣನಿಗೆ ಸೇರಿದ್ದು ನಿಮ್ಮ ತಂದೆ ನಾರಾಯಣಪ್ಪ ಪೌತಿ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ 2 ರಲ್ಲಿರುವ ಅಸ್ತಿ ನಿಮ್ಮ ತಂದೆಗೆ ಕೆಂಪಣ್ಣನವರಿಂದ ಬಂದಿರುತ್ತದೆ ಎಂದರೆ ಸರಿಯಲ್ಲ.

1967 ರಲ್ಲಿ ಕೆಂಪಣ್ಣ ರವರ ಹೆಸರಿನಲ್ಲಿ ನಿಪಿ 8 ರಂತೆ ದಾವಾ ಐಟಂ 1 ಇರುತ್ತದೆ ಎಂದರೆ ಸರಿ . ನಿಪಿ 14 ರಲ್ಲಿರುವ ದಾವಾ ಐಟಂ ನಂ 2 ಸಹ ನಿಮ್ಮ ತಾತ ಕೆಂಪಣ್ಣನವರ ಹೆಸರಿನಲ್ಲಿ ಇದೆ ಎಂದರೆ ಸರಿ . ನಿಪಿ 17 ರಲ್ಲಿರುವ ದಾವಾ ಐಟಂ ನಂ 3 ಸಹ ನಿಮ್ಮ ತಾತ ಕೆಂಪಣ್ಣನವರ ಹೆಸರಿನಲ್ಲಿ ಇದೆ ಎಂದರೆ ಸರಿ . ನಿಪಿ 24 ರಲ್ಲಿರುವ ದಾವಾ ಐಟಂ ನಂ 4 ಸಹ ನಿಮ್ಮ ತಾತ ಕೆಂಪಣ್ಣನವರ ಹೆಸರಿನಲ್ಲಿ ಇದೆ ಎಂದರೆ ಸರಿ . ನಿಪಿ 27 ರಲ್ಲಿರುವ ದಾವಾ ಐಟಂ ನಂ 5 ಸಹ ನಿಮ್ಮ ತಾತ ಕೆಂಪಣ್ಣನವರ ಹೆಸರಿನಲ್ಲಿ ಇದೆ ಎಂದರೆ ಸರಿ . ನಿಪಿ 34 ರಲ್ಲಿರುವ ದಾವಾ ಐಟಂ ನಂ 6 ಸಹ ನಿಮ್ಮ ತಾತ ಕೆಂಪಣ್ಣನವರ ಹೆಸರಿನಲ್ಲಿ ಇದೆ ಎಂದರೆ ಸರಿ .

ದಾವಾ ಐಟಂ 1 ರಿಂದ 6 ರ ಸ್ವತ್ತುಗಳು ವಾದಿ ಹಾಗೂ ನಿಮ್ಮ ಪಿತ್ರಾರ್ಜಿತ ಅಸ್ತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಿಮ್ಮ ತಂದೆ ಯಾವ ದಾಖಲೆ ಅದಾರದ ಮೇಲೆ ಬಂದಿರುತ್ತದೆ ಎಂದರೆ ಡಿ ಸಿ ಅದೇಶದಂತೆ ಬಂದಿರುತ್ತದೆ. ಕೆಂಪಣ್ಣನವರ ಹೆಸರಿನಲ್ಲಿದ್ದ ಆಸ್ತಿಗಳೆಲ್ಲವನ್ನು ನಿಮ್ಮ ತಂದೆ ನಿಪಿ 38 ರಂತೆ ಖಾತೆ ಮಾಡಿಸಿಕೂಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 40 ರಲ್ಲಿರುವ ದೇವಮ್ಮ ಹನುಮಂತಪ್ಪನವರ ಮಗಳು ಎಂದರೆ ಸರಿಯಲ್ಲ. ಕೆ ಹನುಮಂತಪ್ಪ ನಿಮ್ಮ ಚಿಕ್ಕಪ್ಪ ಎಂದರೆ ಸರಿ . ದಾವಾ ಆಸ್ತಿಗಳ ಸಂಬಂದ ನಿಮ್ಮ ಗ್ರಾಮದಲ್ಲಿ ನ್ಯಾಯಾ ಪಂಚಾಯಿತಿಗಳು ಅಗಿರುತ್ತವೆ ಎಂದರೆ ಸರಿಯಲ್ಲ,

ನಾನು ಕನ್ನಡದಲ್ಲಿ ಹಾಗುಾ ಇಂಗ್ಲೀಷ್ ಎರಡರಲ್ಲೂ ಸಹಿ ಮಾಡುತ್ತೇನೆ. ಮದ್ಯಂತರ ಅರ್ಜಿ ಸಂ 22 ರ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದಾಗಿರುತ್ತದೆ. ಈ ದಾವೆಯಲ್ಲಿ ನೀವು ಕನ್ನಡದಲ್ಲಿ ಸಹಿ ಮಾಡಿದ್ದೀರಾ ಅಥವಾ ಇಂಗೀಷ್ ನಲ್ಲಿ ಸಹಿ ಮಾಡಿದ್ದಿರಾ ಎಂದರೆ ಎರಡರಲ್ಲೂ ಸಹಿ ಮಾಡಿರುತ್ತೇನೆ. ವಾದಿಯರು ವಯಸ್ಸಿನಲ್ಲಿ ನಿಮಗಿಂತ ದೊಡ್ಡವರಾ ಚಿಕ್ಕವರಾ ಎಂದರೆ ದೊಡ್ಡವರು. 8 ನೇ ಪ್ರತಿವಾದಿಗೆ ಸುಮಾರು 60 ವರುಷಗಳಾಗಿರುತ್ತದೆ. ದಾವಾ ಅಸ್ತಿಗಳೆಲ್ಲವೂ ಈಗ ನಾರಾಯಣಪ್ಪ ರವರ ಹೆಸರಿಲ್ಲಿ ಇರುತ್ತವೆ. ಈಗಲೂ ಸಹ ಕೆಲವು ಸ್ವತ್ತುಗಳು ಕೆಂಪಣ್ಣ ನವರ ಹೆಸರಿನಲ್ಲಿ ಇರುತ್ತವೆ ಎಂದರೆ 1 ಅಸ್ತಿ ಮಾತ್ರ ಇರುತ್ತದೆ. ಸಿದ್ದಪ್ಪ ರವರು 1992 ರಲ್ಲಿ ಮೃತಪಟ್ಟಿದ್ದು ಅವರ ಮರಣ ಪ್ರಮಾಣ ಪತ್ರವನ್ನು ನೀಡಿರುತ್ತೀರಾ ಎಂದರೆ ಕೊಡುತ್ತೇನೆ. ಸಿದ್ದಪ್ಪ ರವರನ್ನು ನಾನು ನೋಡಿರುತ್ತೇನೆ. ಅವರಿಗೆ ಮದುವೆಯಾಗಿರುವುದಿಲ್ಲ. ಸಿದ್ದಪ್ಪ ರವರ ತಂದೆಯ ಹೆಸರು ಮುನಿಯಪ್ಪ , ಕಂಪಣ್ಣನವರ ತಂದೆಯ ಹೆಸರು ಮುನಿಯಪ್ಪ. ಸಿದ್ದಪ್ಪ ರವರ ಹೆಂಡತಿಯ ಹೆಸರು ಏನು ಎಂದರೆ ಅವರಿಗೆ ಮದುವೆಯಾಗಿಲ್ಲ. ಅವಲಮರಗಘದ ಗೌರಮ್ಮ ಯಾರು ಎಂದರೆ ಗೊತ್ತಿಲ್ಲ, ನಂದಂಬಳ್ಳಿ ಗ್ರಾಮದ ಮುನಿಯಮ್ಮ ಯಾರು ಎಂದರೆ ಗೊತ್ತಿಲ್ಲ. ಸದರಿ ಗೌರಮ್ಮ ಹಾಗೂ ಮುನಿಯಮ್ಮ ಸಿದ್ದಪ್ಪ ನವರ ಮಕ್ಕಳು ಎಂದರೆ ಸರಿಯಲ್ಲ. ಸಿದ್ದಪ್ಪ ರವರು ತೀರಿಕೊಂಡು ಸುಮಾರು 80 ವರುಷಗಳಾಗಿರುತ್ತದೆ ನಾನು ಅಗ ಹುಟ್ಟಿರಲಿಲ್ಲ ಎಂದರೆ 1992 ರಲ್ಲಿ ತೀರಿಕೊಂಡಿರುತ್ತಾರೆ. ಅದಕ್ಕೆ ಸಂಬಂದಿಸಿದ ದಾಖಲಾತಿಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಹಾಗೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಅರ್ ವೇಣುಗೋಪಾಲ್ ಬಿನ್ ಲೇಟ್ ರಾಮಪ್ಪ ಅವಲಮರದಗಘ ಗ್ರಾಮದಲ್ಲಿ ಇದ್ದಾರೆ ಎಂದರೆ ಹೌದು. ಅರ್ ಗಿರಿಜ ಯಾರು ಎಂದರೆ ನನಗೆ ಗೊತ್ತಿಲ್ಲ. ನಿಡಿ 3 ದಾಖಲೆಯನ್ನು ಸೃಷಿ ಮಾಡುವ ಸಮಯದಲ್ಲಿ ಸಿದ್ದಪ್ಪ ಜೀವಂತವಾಗಿರಲಿಲ್ಲ ಎಂದರೆ ಸರಿಯಲ್ಲ, ನಿಡಿ 3 ರಲ್ಲಿರುವ ಹೆಬ್ಬಟ್ಟಿನ ಗುರುತು ಸಿದ್ದಪ್ಪನವರಿನದ್ದಲ್ಲ ಎಂದರೆ ಸರಿಯಲ್ಲ. ನಿಡಿ 3 ನ್ನು ಅರ್ ಗಿರಿಜ ರವರು ಖರೀದಿ ಮಾಡಿದ್ದು ಅದರ ಮೇಲೆ ಮುನಿಯಪ್ಪ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಡಿ 3 ನ್ನು ಯಾವ ವರುಷ ತಯಾರು ಮಾಡಲಾಗಿದೆ ಎಂದರೆ ಗೊತ್ತಿಲ್ಲ. ನಿಡಿ 3 ಯಾವಾಗ ಸಿಕ್ಕಿರುತ್ತದೆ ಎಂದರೆ ಸುಮಾರು 6 ತಿಂಗಳ ಹಿಂದೆ ಸಿಕ್ಕಿರುತ್ತದೆ. ನಿಡಿ 3 ನ್ನು ವಾದಿಗಳಿಗೆ ಭಾಗ ನೀಡಬೇಕೆಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 3 ನ್ನು ಯಾರ ಬಳಿ ಇತ್ತು ಎಂದರೆ ನಮ್ಮ ಮನೆಯಲ್ಲಿಯೇ ಇತ್ತು . ನಿಡಿ 3 ರಲ್ಲಿರುವ ಬರವಣಿಗೆ ಎಷ್ಟು ವರುಷಗಳ ಹಿಂದೆ ಮಾಡಲಾಗಿದೆ ಎಂದು ತಜ್ಞರ ಪರೀಕ್ಷೆಗೆ ಕಳುಹಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ .

ದಿನಾಂಕ 4.03.2014 ರಲ್ಲಿ ವಾದಿಯರು ಹಾಗೂ 1 ರಿಂದ 3 ನೇ ಪ್ರತಿವಾದಿಗಳು ಅವಲಮತ್ತಿಗಘ ಗ್ರಾಮದಲ್ಲಿ ಮೂಜುಬಾನೆ ವಿಭಾಗ ಪತ್ರ ಮಾಡಿಕೊಂಡಿದ್ದು ಅದರಲ್ಲಿರುವ ಸಹಿಗಳನ್ನು ಹಾಗೂ ಪ್ರತಿವಾದ ಪತ್ರ, ವಕಾಲತ್ತು ನಾಮವನ್ನು ತಜ್ಞರ ಪರೀಕ್ಷೆಗೆ ಕಳುಹಿಸಲು ತೊಂದರೆ ಇದೆಯಾ ಎಂದರೆ ಇಲ್ಲ. ಸದರಿ ದಾಖಲೆಯನ್ನು ಬರೆದುಕೊಟ್ಟು ನಂತರ ಬಾಗ ನೀಡದ ಕಾರಣ ವಾದಿಯರು ಈ ದಾವಾ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವಾ ಚಾಲ್ತಿಯಲ್ಲಿರುವಾಗ ನೀವು ದಾವಾ ಐಟಂ ನಂ 1 ನ್ನು 9 ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತೀರಾ ಎಂದರೆ ಸರಿ . ಈ ದಾವಾ ಹೂಡಿದ ನಂತರ ನಿಡಿ 13 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಅದೇಶವನ್ನು ಉಲ್ಲಂಘಣೆ ಮಾಡಿ ಮರಗಳನ್ನು ಕಟಾವು ಮಾಡಿರುತ್ತೇವೆಂದು ಮಿಸ್ ಪ್ರಕರಣ ದಾಖಲು ಅಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮಿಸ್ ನಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ . ಪ್ರತಿವಾದಿ 1 ರವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸರಿ . ಅವರು ಅರೋಗ್ಯವಾಗಿರುತ್ತಾರೆ ಎಂದರೆ ಸರಿ . ವಾದಿಯರು ಹನುಮಂತಪ್ಪ ಹಾಗೂ ವಸಮ್ಮ ಮಕ್ಕಳಾಗಿದ್ದರೂ ಸಹ ಬಾಗ ನೀಡಬೇಕೆಂದು ಸಿದ್ದಪ್ಪನಿಗೆ ಮಕ್ಕಳು ಇರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಪ್ಪನವರ ಹಿಸ್ಸೆ ನಾರಾಯಣಪ್ಪನವರಿಗೆ ಹೋಗಿದ್ದು ಅವರು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಚಿನ್ನಿಗಾ ಅಲಿಯಾಸ್ ಮುನಿಯಪ್ಪ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಮುಂದುವರೆದು ಚಿನ್ನಪ್ಪನ ಮಗ ಮುನಿಯಪ್ಪ ಎಂದು ನುಡಿಯುತ್ತಾರೆ. ಸಿ ನಾರಾಯಣಪ್ಪ ಬಿನ್ ಚಿನ್ನಿಗಾ ಯಾರು ಎಂದರೆ ಚಿನ್ನಪ್ಪನ ಮಗ .

ಸದರಿ ನಾರಾಯಣಪ್ಪ ಹಾಗೂ ನಿಮಗೂ ಸಂಬಂದ ಇದೆಯಾ ಎಂದರೆ ದೊಡ್ಡಪ್ಪನ ಮಗ. ನನ್ನ ದೊಡ್ಡಪ್ಪನ ಹೆಸರು ಚಿನ್ನಪ್ಪ . ಸದರಿ ಚಿನ್ನಪ್ಪನ ತಂದೆ ಹೆಸರು ನನಗೆ ಗೊತ್ತಿಲ್ಲ. ನಿಮ್ಮ ತಂದೆಗೂ ನಿಮ್ಮ ದೊಡ್ಡಪ್ಪನಿಗೂ ವಿಭಾಗ ಅಗಿದೆಯಾ ಎಂದರೆ ಅಗಿರುತ್ತದೆ. ವಿಭಾಗದಿಂದ ಅವರ ವಾರಸುದಾರರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ . ದಾವಾ ಐಟಂ ನಂ 5 ಮತ್ತು 6 ಯಾವಾಗ ಪೋಡಿ ಅಗಿರುತ್ತದೆ ಎಂದರೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

***(ಹರೀಶ್. ಜಿ )***
**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಮುಳಬಾಗಿಲು**